**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>**

**<u>ದಾಂಡೇಲಿ</u>**

**<u>ಸಿ.ಸಿ ನಂಃ 706/2025</u>**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ದಾಂಡೇಲಿ ನಗರ ಪೊಲೀಸ್ ಠಾಣೆ**

**-ವಿರುದ್ಧ -**

**ಆರೋಪಿಃ** **ವಿಶ್ವನಾಥ ತಂಃ ರಘುನಾಥ ಸೂರ್ಯವಂಶಿ**

ವಯಸ್ಸುಃ 25 ವರ್ಷ, ಉದ್ಯೋಗಃ ಖಾಸಗಿ ಕೆಲಸ

ಸಾಃ ಮೌಳಂಗಿ, ದಾಂಡೇಲಿ (ಉ.ಕ)

**ಆಪಾದನೆ**

**ಶ್ರೀಮತಿ. ತೇಜಸ್ವಿನಿ ಸೊಗಲದ** ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ಆಪಾದನೆ ಇಂತಿದೆಃ

ದಿನಾಂಕಃ 23-11-2025 ರಂದು ರಾತ್ರಿ 08-00 ಗಂಟೆಯ ಸುಮಾರಿಗೆ ದಾಂಡೇಲಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಬೇವಾಡಿಯ ರೈಲ್ವೆ ನಿಲ್ದಾಣದ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಮಾದಕ ವಸ್ತುವಾದ ಗಾಂಜಾ ಸೇದುದ್ದಾ ಇರುವ ಸಮಯದಲ್ಲಿ ಸಿಕ್ಕಿ ಬಿದ್ದಿದ್ದು, ಈ ಮೂಲಕ ಕಲಂ 27(b) NDPS ಕಾಯ್ದೆ 1985 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

**ಪ್ರಶ್ನೆಃ 1:** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ** **ತಿಳಿಯಿತು**

**ಪ್ರಶ್ನೆ: 2:** ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ ?

**ಉತ್ತರಃ ತಪ್ಪಾಯಿತು**

(ಈ ಆರೋಪಣೆಯನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ನಂತರ ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ)

ಸ್ಥಳಃ ದಾಂಡೇಲಿ

ದಿನಾಂಕಃ 12-03-2026 **ಸಹಿ ಇದೆ/-**

**ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ**